**C**

**CCE PR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 25. 06. 2019 ] **ಸಂಕೇತ ಸಂಖ್ಯೆ : 01-K**

Date : 25. 06. 2019 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 125**

**[ Max. Marks : 125**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪಠ್ಯಪೂರಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.**<br>**(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕ ಒಂದು ಅಂಕ) :** | 16 × 1 = 16 |
| 1. | ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು ?<br>***ಉತ್ತರ :***<br>ಮುದುಕಿಯ ಎದುರಿಗೆ ರಾಹಿಲನು "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ. ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು" ಎಂದು ಗಂಭೀರವಾಗಿ ನುಡಿದನು. | |
| 2. | ರಾಹಿಲನು ಯಾರು ?<br>***ಉತ್ತರ :***<br>ರಾಹಿಲನು ಒಬ್ಬ ವೈದ್ಯ ಸೈನಿಕನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿಯ ಹೆಸರೇನು ?<br>***ಉತ್ತರ :***<br>ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿಯ ಹೆಸರು ಶಬರಿ. | |
| 4. | 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ ?<br>***ಉತ್ತರ :***<br>'ವೆಸ್ಟ್ ಮಿನ್‌ಸ್ಟರ್' ಎಂಬುದು ಸಂತರು, ಸಾರ್ವಭೌಮರು, ಕವಿಪುಂಗವರ ಸತ್ತವರ ಸ್ಮಾರಕವಾಗಿದೆ. | |
| 5. | ಹುಲಿಯನ್ನು ಎದುರಿಸಲು ಶಾನುಭೋಗರಿಗೆ ಯಾವುದು ಬ್ರಹ್ಮಾಸ್ತ್ರವಾಯಿತು ?<br>***ಉತ್ತರ :***<br>ಶಾನುಭೋಗರಿಗೆ ಹುಲಿಯನ್ನು ಎದುರಿಸಲು ಖಿರ್ದಿ ಪುಸ್ತಕವು ಬ್ರಹ್ಮಾಸ್ತ್ರವಾಯಿತು. | |
| 6. | ಸುಕುಮಾರಸ್ವಾಮಿಯ ತಂದೆ–ತಾಯಿಗಳ ಹೆಸರೇನು ?<br>***ಉತ್ತರ :***<br>ಸುಕುಮಾರಸ್ವಾಮಿಯ ತಂದೆ–ತಾಯಿಗಳು ಸೂರದತ್ತ ಮತ್ತು ಯಶೋಭದ್ರೆ. | |
| 7. | ಜಿ.ಎಸ್. ಶಿವರುದ್ರಪ್ಪನವರ ಪ್ರಕಾರ ಯಾವ ಎಚ್ಚರದೊಳು ಬದುಕಬೇಕಿದೆ ?<br>***ಉತ್ತರ :***<br>ಜಿ.ಎಸ್. ಶಿವರುದ್ರಪ್ಪನವರ ಪ್ರಕಾರ ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದೊಳು ಬದುಕಬೇಕಿದೆ. | |
| 8. | ಕವಿ ಬೇಂದ್ರೆಯವರ ಪ್ರಕಾರ ಹಕ್ಕಿಯು ಯಾವುದರ ಸಂಕೇತವಾಗಿದೆ ?<br>***ಉತ್ತರ :***<br>ಕವಿ ಬೇಂದ್ರೆಯವರ ಪ್ರಕಾರ ಹಕ್ಕಿಯು ಕಾಲದ ಗತಿಯ ಸಂಕೇತವಾಗಿದೆ. | |
| 9. | ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?<br>***ಉತ್ತರ :***<br>ಹಕ್ಕಿಯು ಖಂಡ–ಖಂಡಗಳ ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ. | |
| 10. | ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು ?<br>***ಉತ್ತರ :***<br>ತಮ್ಮ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸುವಂತೆ ಕುಂಪಣಿ ಸರ್ಕಾರ ಆದೇಶ ಹೊರಡಿಸಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ಅಶ್ವಿನಿದೇವತೆಗಳ ವರಬಲದಿಂದ ಜನಿಸಿದವರು ಯಾರು ?<br>***ಉತ್ತರ :***<br>ಅಶ್ವಿನಿದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ. | |
| 12. | ಕವಿ ಕುವೆಂಪುರವರು ನೋಡಿದ ಅಡಿಕೆಯ ತೋಟ ಎಲ್ಲಿದೆ ?<br>***ಉತ್ತರ :***<br>ಕವಿ ಕುವೆಂಪುರವರು ನೋಡಿದ ಅಡಿಕೆಯ ತೋಟ ಬನದ ಅಂಚಿನಲ್ಲಿದೆ. | |
| 13. | ದಿನಪಸುತ ಎಂದರೆ ಯಾರು ?<br>***ಉತ್ತರ :***<br>ದಿನಪಸುತ ಎಂದರೆ ಕರ್ಣ. | |
| 14. | ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು ?<br>***ಉತ್ತರ :***<br>ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳೆಂದರೆ ವರುಣ, ವಾಯು, ಅಗ್ನಿ, ಇಂದ್ರ ಮೊದಲಾದವುಗಳು. | |
| 15. | ವಸಂತ ಯಾರಿಗೆ ಮುಖ ತೋರಲಿಲ್ಲ ?<br>***ಉತ್ತರ :***<br>ಕಮ್ಮಾರ, ಕುಂಬಾರ, ನೇಕಾರ, ಕೇರಿಯ ಮಾರ ಇಂತಹವರಾರಿಗೂ ವಸಂತ ಮುಖ ತೋರಲಿಲ್ಲ. | |
| 16. | ಒಡೆಯನ ಅಂಗಳದಲಿ ಮೈತುಂಬಿ ನಿಂತ ಮರಗಳಾವುವು ?<br>***ಉತ್ತರ :***<br>ಒಡೆಯನ ಅಂಗಳದಲಿ ಮೈತುಂಬಿ ನಿಂತ ಮರಗಳು ಮಾವಿನಮರಗಳು. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $16 \times 2 = 32$ |
| 17. | ಮಹಿಳೆಯ ಆರ್ತನಾದ ಕೇಳಿ ರಾಹಿಲನು ಮನದಲ್ಲಿ ಏನೆಂದುಕೊಂಡನು ?<br>***ಉತ್ತರ :***<br>ಆ ಮಹಿಳೆ ಯಾವ ಅಪಾಯದಲ್ಲಿ ಸಿಲುಕಿದ್ದಾಳೆ ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ ? ತಾನೀಗ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು ? ಗಡಿಪ್ರದೇಶದಲ್ಲಿ 'ಬ್ಲಾಕ್‌ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ ? ಎಂಬ ವಿಚಾರಗಳನ್ನು ರಾಹಿಲನು ತನ್ನ ಮನದಲ್ಲಿ ಅಂದುಕೊಂಡನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು ? | |
| | ***ಉತ್ತರ :*** | |
| | ಸಾಮ್ರಾಟರು ಪಟ್ಟಾಭಿಷೇಕವಾಗುವಾಗ ಮಾತ್ರ ಇದರ ಮೇಲೆ ಕೂಡಬೇಕು. ಈ ಶಿಲೆಯನ್ನು ಒಳಗೊಂಡ ಸಿಂಹಾಸನವು 'ವೆಸ್ಟ್ ಮಿನ್‌ಸ್ಟರ್' ಮಂದಿರದ ಒಂದು ಭಾಗದಲ್ಲಿದೆ. 'ಸ್ಟೋನ್ ಆಫ್ ಸ್ಕೋನ್' ಎಂದು ಇದರ ಹೆಸರು. 3ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲಾ ಸಾಮ್ರಾಟರ ಅಭಿಷೇಕವೂ ಈ ಕಲ್ಲಿನ ಮೇಲೆಯೇ ಆಗಿದೆ. ಅದರಲ್ಲಿ ಯಾವ ಸಿದ್ಧಿ ಮಂತ್ರವಿದೆಯೋ ಇಂಗ್ಲೆಂಡಿನ ಅತುಲ ವೈಭವವನ್ನು ನೋಡಿದರೆ ಇಂಥದೊಂದು ವಿಶೇಷವೇನಾದರೂ ಇದರಲ್ಲಿ ಇರಬೇಕೆನಿಸುತ್ತದೆ. | |
| 19. | ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು ? | |
| | ***ಉತ್ತರ :*** | |
| | 'ವೂಲವರ್ಥ' ಎಂಬ ಸ್ಟೇಷನರಿ ಅಂಗಡಿಯಲ್ಲಿ ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಎಲ್ಲವೂ ಇಲ್ಲಿ ದೊರೆಯುತ್ತವೆ. ಎಲ್ಲಾ ತರಹದ ಸಾಮಾನುಗಳನ್ನು ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಅಂಗಡಿಯ ವಿಧವಿಧದ ವಿಭಾಗಗಳನ್ನು ನಿರ್ಮಿಸಿದ ಬುದ್ಧಿಯ ಚಮತ್ಕಾರ ನೋಡಬಹುದು. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. | |
| 20. | ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರ ಮನದಲ್ಲಿ ಮೂಡಿದ ಭಾವನೆಗಳಾವುವು ? | |
| | ***ಉತ್ತರ :*** | |
| | ಶಾನುಭೋಗರು ಒಂದು ಬಾರಿ ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿ, ಖಜಾನೆಗೆ ಹಣಕಟ್ಟಿ, ಅಲ್ಲಿಯ ಸ್ನೇಹಿತರನ್ನು ಕಂಡು, ಅಲ್ಲಿಂದ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಬರಬೇಕು. ಆಗ ಅವರ ಮನದಲ್ಲಿ "ಕಾಡುದಾರಿ, ಆದರೂ ಬೆಳದಿಂಗಳಿನ ದಿನ, ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು" ಎಂದುಕೊಂಡು ಯೋಚಿಸುತ್ತಾ ಬೇಗಬೇಗ ಹೆಜ್ಜೆಹಾಕಿ ನಡೆಯತೊಡಗಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?<br>***ಉತ್ತರ :***<br>ಭರತಖಂಡದ ಸದ್ವಂಶದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೇ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಶಾನುಭೋಗರನ್ನು ತಿನ್ನಬೇಕೆಂದು ಹಿಂಬಾಲಿಸುತ್ತಿದ್ದ ಹುಲಿಗೆ ಶಾನುಭೋಗರ ಮುಂಭಾಗಕ್ಕೆ ಬಂದು ಅವರನ್ನು ಆಕ್ರಮಿಸುವುದರೊಳಗೆಯೇ ಅವರು ಹುಲಿಯ ಕಡೆಗೆ ಬೆನ್ನು ತಿರುಗಿಸುತ್ತಿರುತ್ತಾರೆ. ಪುಣ್ಯಕೋಟಿ ಹಸು ಆಹ್ವಾನಕೊಟ್ಟಾಗ ತನ್ನ ಅಜ್ಜ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೇ ಪ್ರಾಣಬಿಟ್ಟ ಕಥೆ ಸುವರ್ಣಾಕ್ಷರದಲ್ಲಿ ಲಿಖಿತವಾಗಿ ಇಂದಿಗೂ ಆದರ್ಶವಾಗಿದೆ. ಅಂಥ ಹುಲಿಯ ಮೊಮ್ಮಗನಾಗಿ ಹುಟ್ಟಿದ ತಾನು ಅಧರ್ಮಕ್ಕೆ ಕೈಹಾಕುವುದೇ ? ಹುಲಿಗೆ ಭಗವದ್ಗೀತೆ ನೆನಪಿಗೆ ಬಂತು, ಬೈಬಲ್ ನೆನಪಿಗೆ ಬಂದು 'ಸೈತಾನ ಹಿಂದಿರುಗು' ಎಂದುಕೊಂಡಿದ್ದರಿಂದ ಹಿಂದಿನಿಂದ ಹಾರಿ ಕೊಲ್ಲುವುದನ್ನು ಕೈಬಿಟ್ಟಿತು. | |
| 22. | ದುಷ್ಟಬುದ್ಧಿಯು ತನ್ನ ತಂದೆಯನ್ನು ಸಾಕ್ಷಿಮಾಡಿ ಒಪ್ಪಿಸಿದ ಬಗೆಯನ್ನು ತಿಳಿಸಿ.<br>***ಉತ್ತರ :***<br>ದುಷ್ಟಬುದ್ಧಿಯು ಮನೆಗೆ ಬಂದವನೆ ತನ್ನ ತಂದೆಯ ಕೈಹಿಡಿದು ಏಕಾಂತಕ್ಕೆ ಕರೆದುಕೊಂಡು ಹೋಗಿ ನಡೆದ ವೃತ್ತಾಂತವನ್ನೆಲ್ಲ ತಿಳಿಸುತ್ತಾನೆ. "ನಿಮ್ಮ ಒಂದು ವಚನದಿಂದ ನಮ್ಮ ಪರಿವಾರವೆಲ್ಲ ಹಲವು ಕಾಲ ಹಸಿಯದೆ ಸುಖವಾಗಿ ಬಾಳಬಹುದು, ನೀವು ಆ ಮರದ ಪೊಟರೆಯಲ್ಲಿ ಅಡಗಿ ಕುಳಿತು ಧರ್ಮಬುದ್ಧಿಯೇ ಹೊನ್ನನ್ನೆಲ್ಲವನ್ನು ತೆಗೆದುಕೊಂಡು ಹೋಗಿದ್ದಾನೆ ಎಂದು ನುಡಿಯಬೇಕು' ಎಂದು ಸಾಕ್ಷಿ ಹೇಳಲು ತನ್ನ ತಂದೆಯನ್ನು ಒಪ್ಪಿಸುತ್ತಾನೆ. | |
| 23. | ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?<br>***ಉತ್ತರ :***<br>ಸುಕುಮಾರಸ್ವಾಮಿಯು ಯೌವನನಾಗಿ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯಕಾಂತಿಯಿಂದ ಕಂಗೊಳಿಸುತ್ತಿದ್ದ. ಆತನಿಗೆ ಮೂವತ್ತೆರಡು ಬಳ್ಳಿ ಮಾಡಂಗಳು, ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವಭಾವ, ವಿಲಾಸ ವಿಭ್ರಮಗಳೊಂದಿಗೆ ದೇವಗಣಿಕೆಯನ್ನು ಹೋಲುವ ಮೂವತ್ತಿರ್ವರ್ ದಿವ್ಯಸ್ತ್ರೀಯರ್ಕಳ್ ಮೂವತ್ತೆರಡು ನಾಟಕಂಗಳ್ ಮೂವತ್ತೆರಡು ಕೋಟಿ ಕಸವರಮಂ, ಪಂಚರತ್ನಗಳೊಡಗೂಡಿ ಸುಕುಮಾರಸ್ವಾಮಿಯು ಸುಖಭೋಗಗಳನ್ನು ಅನುಭವಿಸುತ್ತಿದ್ದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು ?<br>***ಉತ್ತರ :***<br>ಅರಸ ವೃಷಭಾಂಕನು ಸುಕುಮಾರಸ್ವಾಮಿಯನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಬಂಧುಗಳು, ಪರಿವಾರದವರು ಶುಭಕರವಾದ ಬಿಳಿಸಾಸಿವೆಯ ಅಕ್ಷತೆಯನ್ನು ಹಾಕಿದಾಗ, ಸುಕುಮಾರಸ್ವಾಮಿಗೆ ಒತ್ತಿದಂತಾಗಿ ಸೊಂಟವನ್ನು ಅಲುಗಾಡಿಸುತ್ತಾನೆ. ದೀಪವನ್ನು ನೋಡಿದಾಗ ಕಣ್ಣೀರು ಸುರಿಸುತ್ತಾನೆ. ಊಟವನ್ನು ಮಾಡುವಾಗ ಅರ್ಧ ಆಹಾರವನ್ನು ನುಂಗಿ, ಅರ್ಧ ಆಹಾರವನ್ನು ಉಗುಳುವುದನ್ನು ಕಂಡು ಆಹಾರದ ಮೇಲಿನ ಅರುಚಿಯಿಂದ ಹೀಗೆ ಮಾಡುತ್ತಿದ್ದಾನೆ. ಈತನಿಗೆ ಏನೋ ವ್ಯಾದಿಯಿರಬಹುದೆಂದು ಅರಸ ಭಾವಿಸುತ್ತಾನೆ. | |
| 25. | ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?<br>***ಉತ್ತರ :***<br>ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿಮುತ್ತು. 'ಲಾವಣಿಗಳು' ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಗದ್ಯದ ಹೊಳಹನ್ನು ಭಾವಗೀತದ ಸತ್ವವನ್ನು ಹೊಂದಿರುವ ಲಾವಣಿಗಳು, ಧ್ವನಿ ರಮ್ಯತೆ, ಅರ್ಥ ಸೌಂದರ್ಯದೊಂದಿಗೆ ವೀರತನ, ಸಾಹಸವನ್ನು ವರ್ಣಿಸುವುದರಿಂದ ಲಾವಣಿಗಳನ್ನು ವೀರಗೀತೆಗಳೆಂದು ಕರೆಯುವುದು ವಾಡಿಕೆಯಾಗಿದೆ. | |
| 26. | ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ತಿಳಿಸಿ.<br>***ಉತ್ತರ :***<br>ಶ್ರೀರಾಮಚಂದ್ರನು ಮಹರ್ಷಿಗಳ ಆದೇಶದಂತೆ ಅಶ್ವಮೇಧವನ್ನು ಕೈಗೊಂಡು, ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸಿರುತ್ತಾರೆ. ಶ್ರೀರಾಮನ ಯಾಗದ ಕುದುರೆ ಎಂದು ಪರಾಕ್ರಮಿಗಳಾದ ರಾಜರು ಕುದುರೆಗೆ ನಮಸ್ಕರಿಸಿ ಕಳುಹಿಸುತ್ತಿದ್ದರು. ಹೀಗೆ ಯಾಗದ ಕುದುರೆ ಭೂಮಿಯಲ್ಲಿ ಸಂಚರಿಸುತ್ತಾ ಒಂದು ದಿನ ವಾಲ್ಮೀಕಿ ಮಹರ್ಷಿಗಳ ಆಶ್ರಮದ ಕಡೆಗೆ ಬರುತ್ತದೆ. ಮುನಿಯ ಆಶ್ರಮದ ವಿನಿಯೋಗಕ್ಕಾಗಿ ಇದ್ದ ಉದ್ಯಾನವನದಲ್ಲಿ ಬೆಳೆದಿದ್ದ ಹಸಿರು ಹುಲ್ಲನ್ನು ನೋಡಿ, ತಿನ್ನಲು ಬಯಸಿ ಯಜ್ಞಾಶ್ವ ವಾಲ್ಮೀಕಿಯ ಆಶ್ರಮದ ವನವನ್ನು ಪ್ರವೇಶಿಸುತ್ತದೆ. | |
| 27. | ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?<br>***ಉತರ :***<br>ಪರಶುರಾಮನು ತನ್ನಲ್ಲಿದ್ದ ಎಲ್ಲಾ ಆಭರಣಗಳನ್ನು ಬೇಡಿದವರಿಗೆ ನೀಡಿದ್ದ. ಭೂಮಿಯನ್ನು ಗುರುವಿಗೆ ನೀಡಿ, ಜಟಾಧಾರಿಯಾಗಿ ತಪಸ್ಸಿಗೆ ಹೋಗಲು ಸಿದ್ಧನಾಗಿದ್ದನು. ಇಂತಹ ಸಮಯದಲ್ಲಿ ಸಂಪತ್ತನ್ನು ಬೇಡಲು ಬಂದ ದ್ರೋಣರಿಗೆ ಅರ್ಘ್ಯವನ್ನು ನೀಡಲು ಚಿನ್ನದ ಪಾತ್ರೆ ಇಲವಾದ್ದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ನೀಡಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು ?<br>***ಉತ್ತರ :***<br>ದ್ರೋಣ ಮತ್ತು ದ್ರುಪದರಿಬ್ಬರೂ ಸಹಪಾಠಿಗಳು. ದ್ರುಪದನು ತಾನು ದೊರೆಯಾದಾಗ ತನ್ನ ಬಳಿಗೆ ಬಂದರೆ ಸಹಾಯ ಮಾಡುವುದಾಗಿ ದ್ರೋಣನಿಗೆ ಹೇಳಿದ್ದನು. ದ್ರೋಣನು ಬಡತನ ಬಂದಾಗ ಆ ಮಾತುಗಳನ್ನು ಜ್ಞಾಪಿಸಿಕೊಂಡು ಸಹಾಯವನ್ನು ನಿರೀಕ್ಷಿಸಿ ದ್ರುಪದನಲ್ಲಿಗೆ ಬಂದಾಗ ರಾಜನು ಮದೋನ್ಮತ್ತನಾಗಿ ದ್ರೋಣನೆಂಬ ಬ್ರಾಹ್ಮಣನಿಗೂ ನನಗೂ ಎಲ್ಲಿಯ ಗೆಳೆತನ ಎಂದು ಆಡಿದಾಗ ಸಭಾಸದನದಲ್ಲಿ ಬಲವಂತವಾಗಿ ಹೊಕ್ಕು ದ್ರೋಣನು, ದ್ರುಪದನಿಗೆ, ನಾನು ನೀವು ಕೂಡಿ ಒಂದೇ ಗುರುವಿನಲ್ಲಿ ವಿದ್ಯಾಭ್ಯಾಸ ಮಾಡಿರುವುದನ್ನು ಮರೆತೆಯಾ ಅಣ್ಣಾ, ಅಧಿಕಾರದ ಮದದಿಂದ ಕೂಡಿದ ನೀವು ಈ ರೀತಿಯ ಮಾತುಗಳನ್ನಾಡುತ್ತಿರುವಿರಿ, ಅಧಿಕಾರ ಸುಳ್ಳನಾಡಿಸುತ್ತದೆ, ನಾಚಿಕೆಯನ್ನು ಬಿಟ್ಟು ಹಾಕುತ್ತದೆ, ಕಳ್ಳನ್ನು ಕುಡಿದವನಂತೆ ಆಡಿಸುತ್ತದೆ ಹೀಗೆ ಅಧಿಕಾರ ಕಳ್‌ನಲ್ಲಿ ಹುಟ್ಟಿದೆ ಎಂದು ಪ್ರತಿಕ್ರಿಯಿಸಿದನು. | |
| 29. | ಜಾತಿ ವ್ಯವಸ್ಥೆಯ ಬಗೆಗೆ ವಿವೇಕಾನಂದರ ಅಭಿಪ್ರಾಯವೇನು ?<br>***ಉತ್ತರ :***<br>ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಇಂದು ಅದು ಘನಿಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ. ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿ ಶೂದ್ರರು, ಅಸ್ಪೃಶ್ಯರು ಸ್ವಾತಂತ್ರ್ಯ ಹೀನರಾಗಿ ಗುಲಾಮತನ ಅನುಭವಿಸುವಂತಾಗಿದೆ. ಶೂದ್ರರು ತಮ್ಮ ಶೂದ್ರತ್ವದ ಶಕ್ತಿಯಿಂದಲೇ ಮೇಲೇಳುವ ಕಾಲ ಬರುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ. | |
| 30. | ಜನರಲ್ ಡಯರ್‌ನು ಜಲಿಯನ್ ವಾಲಾಭಾಗ್‌ನಲ್ಲಿ ಮಾಡಿಸಿದ ಕ್ರೂರ ಪ್ಯಶಾಚಿಕ ಕೃತ್ಯವನ್ನು ತಿಳಿಸಿ.<br>***ಉತ್ತರ :***<br>ಕ್ರೂರ ಮಾರ್ಗದಿಂದಲೇ ಭಾರತೀಯರನ್ನು ಬಗ್ಗು ಬಡಿಯಬಹುದೆಂದು ಎಣಿಕೆ ಹಾಕಿಕೊಂಡಿದ್ದ ಜನರಲ್ ಡಯರ್‌ನು ಜಲಿಯನ್ ವಾಲಾಬಾಗ್‌ನಲ್ಲಿ ನೆರೆದಿದ್ದ ಜನಸಮೂಹವನ್ನು ಕಂಡು ಬ್ರಿಟಿಷ್ ಸಾಮ್ರಾಜ್ಯದ ಅನವರತ ಏಳಿಗೆಗೆ ಇದಕ್ಕಿಂತಲೂ ಸುಲಭವಾದ ಮಾರ್ಗವನ್ನು ಚಿಂತಿಸಲು ಅಶಕ್ತನಾಗಿ, ಕ್ರೂರ, ಪೈಶಾಚಿಕ ಮನೋಭಾವನೆಯ ಆತ ಅಂದು ಅಲ್ಲಿ ಏನೊಂದು ಗೊತ್ತಿರದ ಅಮಾಯಕ ಭಾರತೀಯರ ಮೇಲೆ ೧೬೫೦ ಸುತ್ತುಗಳಷ್ಟು ಗುಂಡಿನ ಮಳೆ ಕರೆಯಿಸಿದ್ದ. ಅಷ್ಟೇ ಸಂಖ್ಯೆಯ ಮುಗ್ಧ ಭಾರತೀಯರ ಪ್ರಾಣ ತೆಗೆಯುವ ಪೈಶಾಚಿಕ ಕೃತ್ಯವನ್ನು ಮಾಡಿಸಿದ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 31. | ಸುಂದರಿಗೆ ಮೃಗವನ್ನು ಮತ್ತೆ ನೋಡಬೇಕೆಂಬ ಆಸೆ ತೀವ್ರವಾಗಲು ಕಾರಣಗಳಾವುವು ?<br>***ಉತ್ತರ :***<br>ಮೃಗ ಎಂದೂ ತನ್ನ ವಚನ ಮುರಿದಿರಲಿಲ್ಲ, ಮನನೋಯಿಸಿರಲಿಲ್ಲ. ತನ್ನನ್ನು ನೆಮ್ಮದಿಯಾಗಿಡುವುದೇ ಅದರ ಸುಖವಾಗಿತ್ತು. ಅರಣ್ಯದ ಅರಮನೆಯ ಸುಖಕ್ಕಿಂತ ಮೃಗದ ವ್ಯಕ್ತಿತ್ವ ಆಕೆಯ ಮನಸ್ಸು ತುಂಬಿತ್ತು. ಅದರ ಮುಖ, ಚಲನ–ವಲನ ನೆನಪಾಗಿ ಮತ್ತೆ ನೋಡಬೇಕೆಂಬ ಆಸೆ ತೀವ್ರವಾಯಿತು. | |
| 32. | ‘ಉತ್ತರಾಣಿ ಗಿಡ’ ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ.<br>***ಉತ್ತರ :***<br>“ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು<br>ಹೋಗೋರ ಮುಂಜೆರಗ ಹಿಡಿಯೋದು–ಎಲೆಬಾಲೆ<br>ಬಾರೆ ಇದರರ್ಥ ಒಡೆದ್ಹೇಳೆ”<br>ಇದು ‘ಉತ್ತರಾಣಿ ಗಿಡ’ ಎಂಬ ಉತ್ತರ ಬರಲು ಜನಪದರು ಹೇಳಿದ ಒಗಟಾಗಿದೆ.<br>**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | $6 \times 3 = 18$ |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | “ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ”<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದೇವನೂರ ಮಹಾದೇವರವರು ಬರೆದಿರುವ ‘ಎದೆಗೆ ಬಿದ್ದ ಅಕ್ಷರ’ ಎಂಬ ವೈಚಾರಿಕ ಲೇಖನದಿಂದ ಆಯ್ದುಕೊಂಡ ‘ಎದೆಗೆ ಬಿದ್ದ ಅಕ್ಷರ’ ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಮನೋವೈದ್ಯರಾದ ಡಾ. ಅಶೋಕ ಪೈ ಅವರು ಹೇಳಿದ ಮನಸ್ಸಿನ ಬಗ್ಗೆ ನಡೆದಿರುವ ಸಂಶೋಧನೆ ಪ್ರಕಾರ. ಒಂದು ಕೊಠಡಿಯಲ್ಲಿ ಟೆಲಿವಿಷನ್ ನೋಡುತ್ತಾ ಕುಳಿತಿರುವವರು ಕೊಲೆ ದೃಶ್ಯ ಬಂದಾಗ ಅವರ ದುಗುಡ ದುಃಖದ ಭಾವನೆಗಳು ನೃತ್ಯದ ದೃಶ್ಯ ಬಂದಾಗ ಖುಷಿಯ ಭಾವನೆಗಳು ಇದು ಏನೂ ಗೊತ್ತಿಲದೆ ಪಕ್ಕದ ಕೊಠಡಿಯಲ್ಲಿ ಕುಳಿತವರ ಮನಸ್ಸಿಗೂ ದುಃಖ ಸಂತೋಷದ ಭಾವನೆಗಳು ಉಂಟಾಗುವುದಂತೆ ಎನ್ನುವುದನ್ನು ವಿವರಿಸುತ್ತಾ ಲೇಖಕರು ಈ ಮಾತನ್ನು ಹೇಳಿದ್ದಾರೆ.<br>***ಸ್ವಾರಸ್ಯ :*** ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತಾ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೇನೊ. ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದೇವನೂರ ಮಹಾದೇವರವರು ಬರೆದಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ವೈಚಾರಿಕ ಲೇಖನದಿಂದ ಆಯ್ದುಕೊಂಡ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ. ಅದು ತರ್ಕವಲ್ಲ ನಡೆಯಿಂದ ನುಡಿಹುಟ್ಟಿದರೆ ಅದು ಅರಿವು. ಅರಿವಿನ ಕುರಿತ ವಿಚಾರಗಳನ್ನು ವಿಮರ್ಶಿಸುತ್ತಾ ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರೂ ಅವರವರದೇ ಇಷ್ಟದೈವವನ್ನು ಆರಾಧಿಸಿ ಕಾಯಕ ಮಾಡುತಿದ್ದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಹೇಳಿಕೆಯನ್ನು ಪ್ರಸ್ತಾಪಿಸಿದ್ದಾರೆ.<br>***ಸ್ವಾರಸ್ಯ :*** ಪ್ರಜ್ಞೆಯನ್ನೇ ದೇವರು ಅಂತ ಅಂದುಕೊಂಡರೆ ಸುಡುವ ಬೆಂಕಿಯನ್ನು ನೆತ್ತಿಯ ಮೇಲೆ ಇಟ್ಟುಕೊಂಡಂತೆ, ತಮ್ಮ ತಮ್ಮ ಪ್ರಜ್ಞ ಮುಂದೆ ಸುಳ್ಳು ಹೇಳಕ್ಕಾಗುವುದಿಲ್ಲ ಪ್ರಜ್ಞೆ ಮುಂದೆ ಸುಳ್ಳುಪಳ್ಳು ನಡೆಯದು. ಆ ಮೂಲಕ ವಚನಕಾರರು ಕಾಯಾ, ವಾಚಾ, ಮನಸಾ ಪರಿಶುದ್ಧರಾಗಿ ಕಾಯಕ ಮಾಡಿದವರು. | |
| 35. | "ಈತನ ಮಾತು ಅಶ್ರುತಪೂರ್ವಮ್"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದುರ್ಗಸಿಂಹ ಕವಿ ರಚಿಸಿರುವ 'ಕರ್ಣಾಟಕ ಪಂಚತಂತ್ರಂ' ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ವಣಿಕ ಪುತ್ರರಾದ ಧರ್ಮಬುದ್ಧಿ ದುಷ್ಟಬುದ್ಧಿಯರು ವ್ಯಾಪಾರ ಮಾಡಿ ಹೆಚ್ಚಿನ ಲಾಭ ಗಳಿಸಿಕೊಂಡು ಮರಳಿ ತಮ್ಮೂರಿಗೆ ಬರುವಾಗ ಮಧುರಾಪುರದ ಹೊರವಲಯದ ಉದ್ಯಾನದಲ್ಲಿ ರಾತ್ರಿ ಕಳೆಯುತ್ತಿದ್ದಾಗ, ಧರ್ಮಬುದ್ಧಿಯು ನಾವು ಗಳಿಸಿಕೊಂಡು ತಂದ ಈ ಎಲ್ಲಾ ಹೊನ್ನನ್ನು ಮನೆಗೆ ಒಯ್ಯುವುದು ಬೇಡ. ಏಕೆಂದರೆ ನಾವು ಮತ್ತೆ ವ್ಯಾಪಾರಕ್ಕಾಗಿ ಬೇರೆ ಬೇರೆ ಊರುಗಳಿಗೆ ತೆರಳುವೆವು. ಆದ್ದರಿಂದ ಸದ್ಯ ಬೇಕಾದಷ್ಟು ಇಟ್ಟುಕೊಂಡು ಉಳಿದ ಎಲ್ಲಾ ಹೊನ್ನನ್ನು ವಟವೃಕ್ಷದ ಪೊಳಲಲ್ಲಿ ಅಡಗಿಸಿಟ್ಟು, ಬೇಕಾದಾಗ ಬಂದು ತೆಗೆದುಕೊಂಡು ಹೋಗೋಣ ಎಂದ ಮಾತಿನಂತೆ ಇರ್ವರೂ ಒಪ್ಪಿ ಹಾಗೆಯೇ ಮಾಡಿ ಹೋಗುತ್ತಾರೆ. ಕೆಲದಿನಗಳ ನಂತರ ದುಷ್ಟನಾದ ದುಷ್ಟಬುದ್ಧಿ ಓರ್ವನೆ ಬಂದು ಪೊನ್ನನೆಲ್ಲವನ್ನು ಕದ್ದು ಒಯ್ದು ನಂತರ ಕಳುವನ್ನು ಧರ್ಮಬುದ್ಧಿಯ ಮೇಲೆ ಹಾಕಿ ನ್ಯಾಯಕ್ಕಾಗಿ ಧರ್ಮಾಧೀಕರಣರಲ್ಲಿಗೆ ಹೋಗಿ, ಪೊನ್ನನ್ನು ಅಡಗಿಸಿಡುವಾಗ ಅಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮನುಷ್ಯರಾರೂ ಇರಲಿಲ್ಲ. ಅಲ್ಲಿರುವ ವಟವೃಕ್ಷವನ್ನೇ ಸಾಕ್ಷಿ ಮಾಡಿ ಕೇಳಿರಿ ಎಂದು ಹೇಳಿದ ಮಾತನ್ನು ಕೇಳಿದ ಧರ್ಮಾಧಿಕರಣರು ಆಶ್ಚರ್ಯಪಟ್ಟು ಈ ವಾಕ್ಯವನ್ನು ಉದ್ಗರಿಸುತ್ತಾರೆ. | |
| | ***ಸ್ವಾರಸ್ಯ :*** ಕಳ್ಳತನ ಮಾಡಿ ಅದರಿಂದ ಪಾರಾಗಲು ವೃಕ್ಷವನ್ನೇ ಸಾಕ್ಷಿ ಮಾಡಿಕೊಂಡದ್ದು, ಮನುಷ್ಯರ ಸುಕೃತ ದುಷ್ಕೃತಗಳು ದೈವಗಳಿಗೆ ಅರಿವಾಗುತ್ತದೆ ಆ ಕಾರಣಕ್ಕಾಗಿ ಈ ಸಾಕ್ಷಿಯು ಉಚಿತವೆಂದು ಹೇಳಿರುವುದು ಇಲ್ಲಿನ ವಿಶೇಷತೆಯಾಗಿದೆ. | |
| 36. | "ಹೊಸಗಾಲದ ಹಸುಮಕ್ಕಳ ಹರಸಿ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಕವಿ ದ.ರಾ. ಬೇಂದ್ರೆಯವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದುಕೊಂಡ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಕವಿತೆಯಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಚಲನಶೀಲತೆ, ಬದಲಾವಣೆ, ಜೀವಂತಿಕೆಯ ಗುಣ, ಕಾಲಚಕ್ರದ ಎದುರಿನಲ್ಲಿ ಎಲ್ಲರೂ ತಲೆಬಾಗಲೇಬೇಕು. ಅದಕ್ಕೆ ಹೊಂದಿಕೊಳ್ಳಬೇಕು. ಯುಗ–ಯುಗಗಳ ಆಯಾ ಕಾಲದಲ್ಲಿ ನಡೆದ ಪ್ರತಿಯೊಂದು ಘಟನೆಯೂ ಕಾಲ ಉರುಳಿದಂತೆ ಇತಿಹಾಸವಾಗುತ್ತಾ ಹೋಗುತ್ತದೆ. ಕವಿ ಬೇಂದ್ರೆಯವರು ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಹಕ್ಕಿಯ ಹಾರುವಿಕೆಯನ್ನು ಪ್ರಕೃತಿಯ ಸಹಜ ಕ್ರಿಯೆಯೊಂದಿಗೆ ಯುಗ–ಯುಗಗಳೇ ಉರುಳಿ ಹೊಸ ಮನ್ವಂತರಕ್ಕೆ ತೆರೆದುಕೊಳ್ಳುವ, ರೆಕ್ಕೆಯನ್ನು ಬೀಸುತ್ತಾ ಪ್ರಕೃತಿಯಲ್ಲಿ ಚೈತನ್ಯ ತುಂಬುವುದು ಎಂದು ಹೇಳುತ್ತಾ ಕವಿ ಈ ಮಾತನ್ನು ಹೇಳುತ್ತಾರೆ. | |
| | ***ಸ್ವಾರಸ್ಯ :*** ಹಕ್ಕಿಯ ಹಾರುವಿಕೆ ಪ್ರಕೃತಿಯ ಸಹಜ ಕ್ರಿಯೆಯೊಂದಿಗೆ ಸಮೀಕರಿಸಿ. ಕಾಲಪಕ್ಷಿಯ ಹೊಡೆತಕ್ಕೆ ಮಾನವ ಪ್ರಪಂಚದಲ್ಲಾಗುವ ವೈಚಿತ್ರ್ಯದ ವಿಸ್ಮಯಗಳಲ್ಲಿ ಒಂದು ಉದ್ಗಾರವಿದು. ಹೊಸತನಕ್ಕೆ ತೆರೆದುಕೊಳ್ಳುವ ಸಂಕೇತವು ಸ್ವಾರಸ್ಯಪೂರ್ಣವಾಗಿದೆ. | |
| 37. | "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಡಾ. ಬಿ.ಎಸ್. ಗದ್ದಗಿಮಠ ಅವರ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದ ಆಯ್ದುಕೊಂಡ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಆಂಗ್ಲರು ಭಾರತೀಯರ ಮೇಲೆ ನಿಶ್ಶಸ್ತ್ರೀಕರಣ ಹುಕುಮನ್ನು ಹೊರಡಿಸಿದರು. ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಿದರೆ ಅವರ ಗುಲಾಮಗಿರಿ ಒಪ್ಪಿದಂತೆ. ಇದ್ದೂ ಸತ್ತಂತೆ ಎಂದು ಭಾವಿಸಿ ಆಯುಧಗಳನ್ನು ಕೊಡಲೊಪ್ಪದೆ ಹಲಗಲಿಯ ಬೇಡರು ದಂಗೆ ಏಳುತ್ತಾರೆ. ಬ್ರಿಟಿಷ್ ಅಧಿಕಾರಿಯನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕೊಲ್ಲುತ್ತಾರೆ, ಆಗ 'ಕಾಂ' ಸಾಹೇಬ ಹಲಗಲಿಗೆ ಮುತ್ತಿಗೆ ಹಾಕಿ ನಿರ್ದಯೆಯಿಂದ ಬೆನ್ನತ್ತಿ ತಿರುತಿರುವಿ, ನಡುವೆ ಹಾಕಿಕೊಂಡು ಎಲ್ಲರನ್ನೂ ಗುಂಡು ಹಾರಿಸಿ ಕೊಲ್ಲುತ್ತಾರೆ ಎಂಬುದನ್ನು ಲಾವಣಿಕಾರ ಕಥಾನಕವಾಗಿ ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾನೆ. | |
| | ***ಸ್ವಾರಸ್ಯ :*** ಬ್ರಿಟಿಷ್ ಅಧಿಕಾರಿಗಳ ದರ್ಪ, ದೌರ್ಜನ್ಯ, ನಿರಂಕುಶ ಆಡಳಿತ ಹಾಗೂ ಅನಕ್ಷರಸ್ಥರಾಗಿದ್ದರೂ ಬೇಡರಲ್ಲಿದ್ದ ದೇಶಭಕ್ತಿ, ಸ್ವಾತಂತ್ರ್ಯ ಹೋರಾಟದ ಕೆಚ್ಚು, ತ್ಯಾಗ ಬಲಿದಾನಗಳಿಂದ ಅಮರರಾಗಿದ್ದಾರೆ. | |
| 38. | "ಅರಸುಗಳ ವಾಜಿಯಂ ಬಿಡು" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಲಕ್ಷ್ಮೀಶ ಕವಿ ವಿರಚಿತ 'ಜೈಮಿನಿ ಭಾರತ' ಕೃತಿಯಿಂದ ಆಯ್ದುಕೊಂಡ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಶ್ರೀರಾಮನ ಅಶ್ವಮೇಧದ ಕುದುರೆ ದೇಶದೇಶಗಳನ್ನು ಸುತ್ತಾಡಿ, ಒಂದು ದಿನ ವಾಲ್ಮೀಕಿ ಮಹರ್ಷಿಗಳ ಆಶ್ರಮದತ್ತ ಬರುತ್ತದೆ. ಅಲ್ಲಿ ಹೂದೋಟವನ್ನು ಹೊಕ್ಕು ಹಸುರಿಗೆ ಬಾಯಿಹಾಕಿ ಹಾಳು ಮಾಡುತ್ತಿರುವುದನ್ನು ಕಂಡ, ವಾಲ್ಮೀಕಿ ಮುನಿಗಳು ತಿಳಿಸಿದಂತೆ ಆ ಉದ್ಯಾನವನದ ಕಾವಲು ಮಾಡುವುದಕ್ಕಾಗಿಯೇ ಸ್ನೇಹಿತರೊಂದಿಗೆ ಅಲ್ಲಿಯೇ ಆಟವಾಡಿಕೊಂಡಿದ್ದ ಲವನು ಕುದುರೆಯನ್ನು ಕಂಡು ಉರಿದೆದ್ದು ತನ್ನ ಉತ್ತರೀಯದಿಂದ ಕುದುರೆಯನ್ನು ಕಟ್ಟಿಹಾಕಲು ತೊಡಗಿದಾಗ, ಅಲ್ಲಿದ್ದ ಮುನಿಸುತರು ಲವನು ಮಾಡುತ್ತಿರುವುದನ್ನು ಕಂಡು, ಅರಸರ ಕುದುರೆಯದು. ಅದನ್ನು ಬಿಡು, ನಮ್ಮನ್ನು ಬಡಿಯುತ್ತಾರೆ ಎಂದು ಅಂಜಿಕೆಯಿಂದ ಹೆದರುತ್ತಾ ಲವನಿಗೆ ಈ ಮಾತನ್ನು ಹೇಳುತ್ತಾರೆ. | |
| | ***ಸ್ವಾರಸ್ಯ :*** ಮುನಿಸುತರಲ್ಲಿರುವ ರಾಜಭಕ್ತಿ, ಗೌರವ, ಹಿಂಜರಿಕೆ, ಹೆದರಿಕೆಗಳು ಸಹಜವಾಗಿದ್ದರೆ, ಕ್ಷಾತ್ರಗುಣಗಳನ್ನು ಲವನಲ್ಲಿ ಕಾಣುತ್ತೇವೆ. | |
| | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ/ಬಿರುದು | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಪು.ತಿ. ನರಸಿಂಹಾಚಾರ್ : | |
| | ***ಉತ್ತರ :*** | |
| | ಪು.ತಿ.ನ. ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಅವರು ಕ್ರಿ.ಶ. ೧೯೦೫ ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕನ್ನಡ ವಿಶ್ವಕೋಶದ ಭಾಷಾಂತರಕಾರರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಗೀತನಾಟಕ, ಕವಿತೆ, ಸಣ್ಣಕತೆ, ಪ್ರಬಂಧ, ವಿಚಾರಸಾಹಿತ್ಯ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿ ವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಾಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ ಇವರ ಪ್ರಮುಖ ಕೃತಿಗಳಾಗಿವೆ.<br>‘ಹಂಸದಮಯಂತಿ ಮತ್ತು ಇತರ ರೂಪಕಗಳು’ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ‘ಶ್ರೀ ಹರಿಚರಿತೆ’ ಕಾವ್ಯಕ್ಕೆ ‘ಪಂಪ ಪ್ರಶಸ್ತಿ’ ಲಭಿಸಿದೆ. ಇವರಿಗೆ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದೆ. ೧೯೮೧ ರಲ್ಲಿ ಚಿಕ್ಕಮಗಳೂರಿನಲ್ಲಿ ಜರುಗಿಸಿದ ೫೩ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗಿದೆ. | |
| 40. | ಕುವೆಂಪು :<br>***ಉತ್ತರ :***<br>‘ಕುವೆಂಪು’ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳಿಯವರು. ಅವರು ಜನಿಸಿದ್ದು ೧೯೦೪ ಡಿಸೆಂಬರ್ ೨೯ ರಂದು.<br>ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರಾಗಿ ಸೇವೆಯನ್ನು ಪ್ರಾರಂಭಿಸಿದ ಅವರು ಪ್ರಿನ್ಸಿಪಾಲರಾಗಿ, ಕುಲಪತಿಗಳಾಗಿ ಸೇವೆಗೈಯುವುದರ ಜೊತೆಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃತಿಗಳನ್ನು ರಚಿಸಿದ್ದಾರೆ. ಅವರ ಪ್ರಮುಖ ಕೃತಿಗಳು : ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ, ನನ್ನ ದೇವರು ಮತ್ತು ಇತರ ಕಥೆಗಳು, ಸನ್ಯಾಸಿ ಮತ್ತು ಇತರ ಕಥೆಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ತಪೋನಂದನ, ರಸೋವೈಸಃ ಅಮಲನ ಕಥೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿಜೋಗಿ – ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್, ನೆನಪಿನ ದೋಣಿಯಲ್ಲಿ ಮುಂತಾದ ಸುಮಾರು ಎಪ್ಪತ್ತು ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಸಂಪತ್ತನ್ನು ಸಮೃದ್ಧಗೊಳಿಸಿದ್ದಾರೆ.<br>ಕುವೆಂಪುರವರ ‘ಶ್ರೀರಾಮಾಯಣದರ್ಶನಂ’ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಭಾರತೀಯ ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ. ೧೯೫೭ ರಲ್ಲಿ ಧಾರವಾಡದಲ್ಲಿ ಜರುಗಿಸಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ, ೧೯೬೪ ರಲ್ಲಿ ರಾಷ್ಟ್ರಕವಿ, ೧೯೮೮ ರಲ್ಲಿ ಪಂಪ ಪ್ರಶಸ್ತಿ, ೧೯೯೧ ರಲ್ಲಿ ಪದ್ಮವಿಭೂಷಣ ಪ್ರಶಸ್ತಿ, ೧೯೯೨ ರಲ್ಲಿ ಕರ್ನಾಟಕ ರತ್ನ ಪ್ರಶಸ್ತಿಗಳನ್ನು ಅಲ್ಲದೆ ಹಲವು ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್‌ಗಳಿಗೆ ಭಾಜನರಾಗಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 41. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ಪುಟ್ಟಿದ ನೂರ್ವರು ..............................................<br>...................................................................<br>...................................................................<br>...................................................................<br>......................................... ಛಲಮನೆ ಮೆಱೆವೆಂ॥<br>**ಅಥವಾ**<br>ನೆಲಕಿೞಿವೆನೆಂದು ...............................................<br>...................................................................<br>...................................................................<br>...................................................................<br>.............................................. ಪುದುವಾೞ್ದಿಪೆನೇ॥<br>***ಉತ್ತರ :***<br>ಪುಟ್ಟಿದ ನೂರ್ವರುಮೆನ್ನೊಡ।<br>ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ॥<br>ಪುಟ್ಟಿ ಪೊದೞ್ದುದು ಸತ್ತರ್।<br>ಪುಟ್ಟರೆ ಪಾಂಡವರೊಳಿಱಿದು ಛಲಮನೆ ಮೆಱೆವೆಂ॥<br>**ಅಥವಾ**<br>ನೆಲಕಿೞಿವೆನೆಂದು ಬಗೆದಿರೆ।<br>ಚಲಕಿೞಿವೆಂ ಪಾಂಡುಸುತರೊಳೀನೆಲನಿದು ಪಾ॥<br>ೞ್ನೆಲನೆನಗೆ ದಿನಪಸುತನಂ।<br>ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ದಿಪೆನೇ॥ | 1 × 4 = 4 |
| 42. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :**<br>ವಿಷಯಾಂಶಕ್ಕೆ<br>ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ<br>ಒಟ್ಟು<br>ಕಲುಷಿತವಾದೀ ನದೀಜಲಗಳಿಗೆ<br>ಮುಂಗಾರಿನ ಮಳೆಯಾಗೋಣ<br>ಬರಡಾಗಿರುವೀ ಕಾಡುಮೇಡುಗಳ<br>ವಸಂತವಾಗುತ ಮುಟ್ಟೋಣ. | 1 × 4 = 4<br>3 ಅಂಕಗಳು<br>1 ಅಂಕ<br>4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :*<br>ಕವಿ ಜಿ.ಎಸ್. ಶಿವರುದ್ರಪ್ಪನರು 'ಸಂಕಲ್ಪಗೀತೆ' ಎಂಬ ಕವನದಲ್ಲಿ ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು. ಸಾಧಕರು ತಾವು ಕಂಡ ಕನಸನ್ನು ಅದೆಷ್ಟೇ ತೊಡಕುಗಳು ಬಂದರೂ ಅಡ್ಡಿ ಆತಂಕಗಳು ಎದುರಾದರೂ ತಮ್ಮ ಕನಸನ್ನು ನನಸು ಮಾಡಿಕೊಳ್ಳುತ್ತಾರೆ. ಹೀಗೆ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಮಾತ್ರ ಯಶಸ್ಸು ಲಭಿಸುತ್ತದೆ. ಆ ದಿಕ್ಕಿನಲ್ಲಿ ನಮ್ಮಲ್ಲಿನ ಭೇದಭಾವಗಳನ್ನು ಹೋಗಲಾಡಿಸಿಕೊಂಡು ಐಕ್ಯದಿಂದ ಪ್ರಯತ್ನಶೀಲರಾದಾಗ ನಮ್ಮ ಬಲ ವರ್ಧಿಸುತ್ತದೆ. ನಮ್ಮ ಸುತ್ತಲೂ ಆವರಿಸಿರುವ ಅಜ್ಞಾನದ ಕತ್ತಲೆಗೆ ಬೆಳಕನ್ನು ಹಚ್ಚೋಣ ಎಚ್ಚರದಲಿ ಮುನ್ನಡೆಯುತ್ತಾ ಕಲುಷಿತವಾಗಿರುವ ಸುತ್ತಲಿನ ಪರಿಸರವನ್ನು ಶುಚಿಯಾಗಿಸುವ, ಬರಡಾಗಿರುವ ಕಾಡುಮೇಡುಗಳನ್ನು ಸಮೃದ್ಧಗೊಳಿಸಿಕೊಳ್ಳುವ ದಿಕ್ಕಿನತ್ತ ದೃಢಸಂಕಲ್ಪದಿಂದ ಎಲ್ಲರೂ ಪ್ರಯತ್ನಶೀಲರಾದಾಗ ಸಮಾಜವನ್ನು ಸ್ವಾಸ್ಥ್ಯದ ನೆಲೆಯಾಗಿಸಲು ಸಾಧ್ಯವಾಗುತ್ತದೆ. ದೃಢಸಂಕಲ್ಪದಿಂದ ಕಾರ್ಯಶೀಲರಾದರೆ 'ಅಸಾಧ್ಯವಾದುದು ಯಾವುದೂ ಇಲ್ಲ', ಆದರೆ ಸಾಧಿಸಲೇಬೇಕೆಂಬ ಛಲ ನಮ್ಮಲ್ಲಿ ಬರುವಂತಾಗಬೇಕು ಎಂಬುದನ್ನು ಈ ಭಾವಗೀತೆ ಸರಳವಾಗಿ ಸುಂದರವಾಗಿ ಅಭಿವ್ಯಕ್ತಪಡಿಸುತ್ತದೆ.<br>ಹಿಂದೆ ಗುರು, ಮುಂದೆ ಗುರಿ, ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ, ಸಂಕಲ್ಪದಿಂದ ಮುನ್ನಡೆದರೆ ಏನೆಲ್ಲವನ್ನು ಸಾಧಿಸಬಹುದು ಎಂಬುದು ಇಲ್ಲಿನ ಮೌಲ್ಯವಾಗಿದೆ. | |
| 43. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | $2 \times 4 = 8$ |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು ?<br>***ಅಥವಾ***<br>ವಿಶ್ವೇಶ್ವರಯ್ಯ ಅವರು ಎಂಜಿನಿಯರ್‌ರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.<br>*ಉತ್ತರ :*<br>ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೨ ಆಗಸ್ಟ್ ೮ ರಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು. ದಿವಾನರಾಗಿದ್ದ ಸರ್ ಕೆ. ಶೇಷಾದ್ರಿ ಅಯ್ಯರ್ ಅವರ ಸಹಕಾರದಿಂದ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕಂಕಣಬದ್ಧರಾದರು. ಅರಸು ಮನೆತನದಿಂದ ಬಂದವರಾದರೂ ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವುದರ ಪರವಾಗಿದ್ದರು. 'ಪ್ರಜಾಪ್ರತಿನಿಧಿ ಸಭೆ' ಹೊಸರೂಪ ಪಡೆಯಿತು. ೧೯೨೩ ರಲ್ಲಿ ಕಾನೂನೊಂದನ್ನು ಜಾರಿಗೆ ತಂದು 'ಪ್ರಜಾಪ್ರತಿನಿಧಿ ಸಭೆ'ಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿಸಿದರು. ವರ್ಷಕ್ಕೆ ಎರಡು ಬಾರಿ ಸಮಾವೇಶಗೊಂಡು ಕಲಾಪನಡೆಸಿ, ವಾರ್ಷಿಕ ಆಯ–ವ್ಯಯ ಪರಿಶೀಲನೆ, ಪ್ರಶ್ನೋತ್ತರ, ಠರಾವು ಮಂಡಿಸಲಾಗುತಿತ್ತು. ಹೆಚ್ಚಿನ ಸದಸ್ಯರು ಜನರಿಂದಲೇ ಆಯ್ಕೆಯಾಗುತ್ತಿದ್ದರು. ೧೯೦೭ ರಲ್ಲಿ 'ನ್ಯಾಯ ವಿಧಾಯಕ ಸಭೆ' ಸ್ಥಾಪಿಸಿದರು. ಇದು ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಬೆಂಗಳೂರಿನಲ್ಲಿ ಎರಡು ಬಾರಿ ಸಮಾವೇಶಗೊಂಡು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲವನ್ನು ವಿಮರ್ಶಿಸುವ, ಕಾನೂನನ್ನು ಜಾರಿಗೆ ತರುವ ಅಧಿಕಾರ ಇದ್ದಿತು. ಗ್ರಾಮನಿರ್ಮಲೀಕರಣ, ವೈದ್ಯ ಸಹಾಯ, ವಿದ್ಯಾಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು, ಸ್ವಯಂ ಆಡಳಿತ ಕ್ಷೇತ್ರಗಳಾದವು. ಶಿವನ ಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ ವಾಣಿ ವಿಲಾಸಸಾಗರ, ಕೃಷ್ಣರಾಜಸಾಗರ ಜಲಾಶಯಗಳನ್ನು ನಿರ್ಮಿಸಿದರು. ಉಚಿತ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಜಾರಿಗೆ ತಂದರು. ಮೈಸೂರು ವಿಶ್ವವಿದ್ಯಾಲಯ, ಉಚಿತ ಆಸ್ಪತ್ರೆ, ಮೈಸೂರು ಬ್ಯಾಂಕ್, ಸಹಕಾರ ಸಂಘಗಳನ್ನು ಸ್ಥಾಪಿಸಿದರು. ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದರು. ಭರತಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮಾಡಿ ಮೈಸೂರು ಸಂಸ್ಥಾನವನ್ನು 'ಮಾದರಿ ಮೈಸೂರು ರಾಜ್ಯವನ್ನಾಗಿ' ರೂಪಿಸಿ 'ಸಾಮಾಜಿಕ ಕಾನೂನುಗಳ ಹರಿಕಾರ' ಎಂಬ ಕೀರ್ತಿಗೆ ಪಾತ್ರರಾದರು.<br>**ಅಥವಾ**<br>ಪೂನಾದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಪ್ರಥಮ ಸ್ಥಾನದಲ್ಲಿ ಪಡೆದು ಜೇಮ್ಸ್ ಬರ್ಕ್ಲಿ ಬಹುಮಾನಕ್ಕೆ ಪಾತ್ರರಾದ ಸರ್ ಎಂ. ವಿಶ್ವೇಶ್ವರಯ್ಯನವರು ೧೮೮೪ ರಲ್ಲಿ ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆಯನ್ನು ಪ್ರಾರಂಭಿಸಿದರು. ಖಾನ್‌ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಯಶಸ್ಸು ಗಳಿಸಿ, ಮೇಲಾಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು. ಸಿಂಧ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಗೊಳಿಸಿದರು. ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದರು. ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ಮುಂದೆ ನಾಲ್ಕು ವರ್ಷಗಳ ಕಾಲ ಮುಂಬೈ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪ್ರಾಂತ್ಯದ ಸ್ಯಾನಿಟರಿ ಎಂಜಿನಿಯರ್ ಆಗಿ ನೇಮಕಗೊಂಡರು. ಈ ಹುದ್ದೆಗೆ ನೇಮಕವಾದ ಪ್ರಥಮ ಭಾರತೀಯರು ಎಂಬ ಹೆಗ್ಗಳಿಕೆ ಅವರದಾಯಿತು.<br>ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡೂ ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು. ಮುಂದೆ ವಿಶ್ವೇಶ್ವರಯ್ಯನವರು ಮೂರು ವರ್ಷಗಳ ಕಾಲ ಮೈಸೂರು ಸಂಸ್ಥಾನದಲ್ಲಿ 'ಮುಖ್ಯ ಎಂಜಿನಿಯರ'ರಾಗಿ ಕಾರ್ಯನಿರ್ವಹಿಸಿ ಕಾವೇರಿ ನದಿಗೆ ಕನ್ನಂಬಾಡಿ ಅಣೆಕಟ್ಟು, ರೈಲು ಮಾರ್ಗಗಳ ವಿಸ್ತರಣೆ, ಮಾರಿಕಣಿವೆ ಜಲಾಶಯದ ನೀರು ಹಂಚಿಕಯ ಪುನರ್ವ್ಯವಸ್ಥೆ, ಸಣ್ಣ ನೀರಾವರಿ ವ್ಯವಸ್ಥೆಗೆ ಮರುಜೀವ. ಇವೆಲ್ಲವು ವಿಶ್ವೇಶ್ವರಯ್ಯನವರು ಎಂಜಿನಿಯರ್‌ರಾಗಿ ಮಾಡಿದ ಅಭಿವೃದ್ಧಿಕಾರ್ಯಗಳ ಕುರುಹುಗಳಾಗಿವೆ. | |
| 44. | ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.<br>**ಅಥವಾ**<br>ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಸೆ ಆಮಿಷಗಳೇನು ?<br>***ಉತ್ತರ :***<br>ಧರ್ಮರಾಯನ ಮಯನಿರ್ಮಿತ ಅರಮನೆಯಲ್ಲಿ ಅವಮಾನಿತನಾದ ಕೌರವನು ಧರ್ಮರಾಯನನ್ನು ದ್ಯೂತಕ್ಕೆ ಆಹ್ವಾನಿಸಿ ಜೂಜಾಟದಲ್ಲಿ ಸೋಲಿಸುತ್ತಾನೆ. ದ್ಯೂತದ ಪಣದಂತೆ ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸವನ್ನು ಮುಗಿಸಿ ಬಂದ ಪಾಂಡವರು ತಮ್ಮ ಪಾಲಿನ ರಾಜ್ಯವನ್ನು ಕೇಳುತ್ತಾರೆ. ಅಜ್ಞಾತವಾಸವು ಪೂರ್ಣವಾಗಿಲ್ಲ ಎಂಬ ನೆಪವನ್ನೊಡ್ಡಿ ಕೌರವನು ರಾಜ್ಯ ನೀಡಲು ನಿರಾಕರಿಸುತ್ತಾನೆ. ಶ್ರೀಕೃಷ್ಣನ ಸಂಧಾನ ವಿಫಲಗೊಂಡು ಕುರುಕ್ಷೇತ್ರ ಯುದ್ಧ ಅನಿವಾರ್ಯವೆಂಬುದು ಶ್ರೀಕೃಷ್ಣನಿಗೆ ಮನವರಿಕೆಯಾಗಿ, ದುರ್ಯೋಧನನ ಬಲವನ್ನು ಕುಗ್ಗಿಸಲು ಪ್ರಯತ್ನಿಸಲಾರಂಭಿಸಿ, ಮೊದಲು ವಿದುರ–ಕೌರವ ದೂರಾಗುವಂತೆ ಮಾಡಿ, ನಂತರ ಕೌರವರ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಇನ್ನೊರ್ವ ಬಲಶಾಲಿ ಕರ್ಣನಿಂದ ಪಾಂಡವರನ್ನು ರಕ್ಷಿಸಲು ಬಗೆದು ಕರ್ಣನಿಗೆ ಆತನ ಜನ್ಮರಹಸ್ಯವನ್ನು ತಿಳಿಸುತ್ತಾನೆ. ಕುಂತಿ ಪಡೆದ ಐದು ಮಂತ್ರಗಳಲ್ಲಿ ಮೊದಲ ಮಂತ್ರದಿಂದ ಜನಿಸಿದವನು ನೀನು, ಪಾಂಡವರೆಲ್ಲರೂ ನಿನ್ನ ಸಹೋದರರು, ಪಾಂಡವರ ಹಿರಿಯ ನೀನೇ, ನೀನು ಕೌರವನನ್ನು ಬಿಟ್ಟು ನಿನ್ನ ಸೋಹದರರ ಕಡೆಗೆ ಬಂದರೆ ಹಸ್ತಿನಾಪುರದ ರಾಜನೇ ನೀನಾಗುವಿ ಎಂಬುದನ್ನೆಲ್ಲ ಹೇಳಿ ಕರ್ಣನ ಮನಸ್ಥಿತಿಯನ್ನು ಶ್ರೀಕೃಷ್ಣ ಚಂಚಲಗೊಳಿಸುತ್ತಾನೆ. ತನ್ನ ಜನ್ಮರಹಸ್ಯ ತಿಳಿದು ಕರ್ಣನ ಕುತ್ತಿಗೆಯ ನರಗಳು ಬಿಗಿದು, ಕಣ್ಣೀರು ಸುರಿಸುತ್ತಾನೆ. ಕೌರವನಿಗೆ ಕೇಡಾಗುತ್ತದೆ, ಶ್ರೀಕೃಷ್ಣನ ಹಗೆ ಹೊಗೆದೋರದೆ ಸುಡದೆ ಬಿಡುವುದಿಲ್ಲ. ಎಂದು ಚಿಂತಿತನಾಗುತ್ತಾನೆ. ಕೆಲಕಾಲ ಸುಮ್ಮನಿದ್ದ ಕರ್ಣನನ್ನು ಕುರಿತು ಮತ್ತೆ ಮುಂದುವರೆದು ಹೀಗೆ ಕೇಳುತ್ತಾನೆ. ನೀನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಾಜನಾಗಿ ಪಾಂಡವರಿಂದ ಸೇವೆ ಮಾಡಿಸಿಕೊಳ್ಳಲು ಮನಸ್ಸಿಲ್ಲವೆ ? ನಾನು ನಿನಗೆ ಕೇಡು ಬಗೆಯುತ್ತಿಲ್ಲ ಎಂದಾಗ ಕರ್ಣನು ಕೃಷ್ಣ ಈ ಭೂಮಿಗೆ, ರಾಜ್ಯಕ್ಕೆ ಮನಸೋಲುವವನಲ್ಲ. ಕೌರವರಿಂದ ಪಾಂಡವರಿಂದ ಸೇವೆ ಮಾಡಿಸಿಕೊಳ್ಳಲು ಇಷ್ಟವಿಲ್ಲ. ನನ್ನನ್ನು ಕಾಪಾಡಿದ ಒಡೆಯನಿಗೆ ಶತ್ರುಗಳ ತಲೆಗಳನ್ನು ಕಡಿದು ಒಪ್ಪಿಸುವ ಅವಸರದಲ್ಲಿದ್ದೆ. ಅದಕ್ಕೂ ಮೊದಲೇ ಕೌರವನನ್ನು ಕೊಂದುಬಿಟ್ಟೆ. ಯಾರು ಏನೇ ಹೇಳಿದರೂ ಕೌರವನೇ ನನಗೆ ಎಲ್ಲಾ. ನಾಳೆ ನಡೆಯುವ ಮಹಾಭಾರತ ಯುದ್ಧದಲ್ಲಿ ದುರ್ಯೋಧನನ ಋಣ ತೀರುವಂತೆ ಹೋರಾಡುತ್ತೇನೆ. ಅವನಿಗಾಗಿ ಶರೀರವನ್ನು ಅರ್ಪಿಸುತ್ತೇನೆ. ನಿನ್ನವರಾದ ಪಾಂಡವರನ್ನು ನೋಯಿಸುವುದಿಲ್ಲ ಎನ್ನುತ್ತಾನೆ. ಸ್ವಾಮಿ ನಿಷ್ಠೆಗೆ ಬದ್ಧನಾದ ಕರ್ಣನಿಗೆ ಆತನ ಜನ್ಮರಹಸ್ಯ ಅಸಹಾಯಕನನ್ನಾಗಿ, ಸಂಕಟದಿಂದ ಬಳಲುವಂತೆ ಮಾಡುತ್ತದೆ. ಆದರೂ ಕರ್ಣ ಪ್ರಲೋಭನೆಗೆ ಒಳಗಾಗುವುದಿಲ್ಲ. ಇಲ್ಲಿ ಕರ್ಣನ ಹಿರಿಮೆ–ಗರಿಮೆ ವ್ಯಕ್ತವಾಗಿದೆ.<br>***ಅಥವಾ***<br>ಶ್ರೀಕೃಷ್ಣ ಸಂಧಾನವು ದುರ್ಯೋಧನನ ಹಠದಿಂದ ತಿರಸ್ಕೃತವಾಗುತ್ತದೆ. ಕುರುಕ್ಷೇತ್ರ ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಶ್ರೀಕೃಷ್ಣನು ಭೇದ ತಂತ್ರವನ್ನು ಬಳಸಿ ಕರ್ಣನಿಗೆ ಜನ್ಮರಹಸ್ಯವನ್ನು ತಿಳಿಸುತ್ತಾನೆ. ಶತ್ರುವಿನೊಡನೆ ಸಮರಕ್ಕಿಳಿದು ಕಾದಾಡುವ ಮುನ್ನ ಶತ್ರುಬಲದ ವಿವಿಧ ಆಯಾಮಗಳನ್ನು ಶಮನಗೊಳಿಸಿದಾಗ ಗೆಲವು ಸಾಧ್ಯ ಎಂಬುದು ರಾಜತಂತ್ರ. ಕೌರವನ ಪಕ್ಷದಲ್ಲಿ ಇದ್ದ ಕರ್ಣನನ್ನು ಪಾಂಡವರ ಕಡೆಗೆ ಸೆಳೆಯಲು ಕರ್ಣನನ್ನು ಕರೆದು ರಥದಲ್ಲಿ ಪಕ್ಕದಲ್ಲಿಯೇ ಕೂಡಿಸಿಕೊಂಡು ಕುಂತಿ ಪಡೆದ ಐದು ಮಂತ್ರಗಳಲ್ಲಿ ಮೊದಲ ಮಂತ್ರದಿಂದ ಜನಿಸಿದವನು ನೀನು. ಈ ಭೂಮಿಗೆ ನಿಜವಾಗಿ ನೀನೇ ಒಡೆಯನಾಗಬೇಕು. ನಿಮ್ಮಲ್ಲಿ ಯಾದವರು, ಕೌರವರು ಎಂಬ ಭೇದವಿಲ್ಲ. ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ. ಕೌರವರು, ಪಾಂಡವರು ನಿನ್ನ ಸೇವಕರಾಗುತ್ತಾರೆ. ಇದನ್ನು ಬಿಟ್ಟು ದುರ್ಯೋಧನನ ಎಂಜಲಿಗೆ ಕೈಚಾಚುವುದು ಸರಿಯೆ ? ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು, ನಡುವಿನಲ್ಲಿ ಮಾದ್ರರು, ಮಾಗಧರು, ಯಾದವರು ಇರುತ್ತಾರೆ. ಇವರ ನಡುವೆ ರಾಜನಾಗಿ ವಿಜೃಂಭಿಸುವುದನ್ನು ಬಿಟ್ಟು ದುರ್ಯೋಧನನು ಕರೆದಾಗ ಸೇವಕನಂತೆ 'ಸ್ವಾಮಿ ನಿಮ್ಮ ಪ್ರಸಾದ' ಎನ್ನುವುದು ಕಷ್ಟವಾಗುವುದಿಲ್ಲವೆ ? ಆದ್ದರಿಂದ ಪಾಂಡವರ ಪಕ್ಷವನ್ನು ಸೇರುವಂತೆ ಕೃಷ್ಣನು ಆಮಿಷಗಳನ್ನು ಒಡ್ಡುತ್ತಾನೆ. ಸಾಮಾನ್ಯನಿಗೆ ಅತಿಯಾದ ಸಂತೋಷವನ್ನು ನೀಡಬಹುದಾದ ಜನ್ಮರಹಸ್ಯ ಸಂಗತಿ, ಅಸಾಮಾನ್ಯನೂ, ಶೌರ್ಯಕ್ಕೆ, ದಾನಕ್ಕೆ ಉದಾತ್ತತೆಗೆ, ಕರುಣೆಗೆ ಹೆಸರಾಗಿದ್ದ ಕರ್ಣನಿಗೆ ಎಂತಹ ಸಂಕಟವನ್ನು ಉಂಟುಮಾಡಿತು. ಅವನ ಸ್ವಾಮಿನಿಷ್ಠೆಯ ಮುಂದೆ ಶ್ರೀಕೃಷ್ಣನೊಡ್ಡಿದ ಪ್ರಲೋಭನೆ ವ್ಯರ್ಥಗೊಂಡು ಕರ್ಣನ ವ್ಯಕ್ತಿತ್ವದ ಹಿರಿಮೆ ಇನ್ನಷ್ಟು ಹೆಚ್ಚಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | 2 × 2 = 4 |
| | ಮಹಾತ್ಮ ಬಸವಣ್ಣನವರು ಕಟ್ಟಬಯಸಿದ್ದು ಸರ್ವಶೋಷಣೆಗಳಿಂದಲೂ ಮುಕ್ತವಾದ, ಸ್ವಾತಂತ್ರ್ಯ, ಸಮಾನತೆ, ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ, ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು. ಅವರು ಕಲ್ಪಿಸಿಕೊಂಡು ಕಟ್ಟಬಯಸಿದ ನೂತನ ಸಮಾಜದ ಒಂದು ಮುಖ್ಯಾಧಾರವೆಂದರೆ ಕಾಯಕ ತತ್ತ್ವ. ಕಾಯಕಕ್ಕೆ ಬಸವಣ್ಣನವರಿತ್ತ ಪ್ರಾಧಾನ್ಯ ಅತ್ಯಂತ ಗಮನಾರ್ಹವಾದುದು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ದೈಹಿಕವಾದ ಕೆಲಸ ಮಾಡಬೇಕು, ಅದರಿಂದಲೇ ಜೀವನ ನಡೆಸಬೇಕು ಎಂಬುದು ಕಾಯಕ ತತ್ತ್ವದ ಒಂದು ಮುಖವಾದರೆ ಯಾವ ಕೆಲಸವೂ ಕೀಳಲ್ಲ, ಪ್ರತಿಯೊಂದು ಕೆಲಸವೂ ಪವಿತ್ರ ಎನ್ನುವುದು ಇನ್ನೊಂದು ಮುಖ. ಅನೇಕ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ರಾಮಬಾಣವಾಗಬಲ್ಲುದು ಈ ಕಾಯಕತತ್ತ್ವ ಸಮಾಜದ ಅಸಮತೆ, ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವಾಗಿದೆ; 'ಕಾಯಕವೇ ಕೈಲಾಸ'. | |
| | ಬಸವಣ್ಣನವರು ಸಂಸಾರತ್ಯಾಗವನ್ನು ವಿಧಿಸುವುದಿಲ್ಲ. ಸಂಸಾರದಲ್ಲಿದ್ದುಕೊಂಡೇ ಪರಮಾರ್ಥವನ್ನು ಸಾಧಿಸುವ ಕಲೆಯನ್ನು ಅವರು ಉಪದೇಶಿಸಿದ್ದಾರೆ. ಅಂತರಂಗ–ಬಹಿರಂಗಗಳ ಸಾಮರಸ್ಯವನ್ನು ಅವರು ವಿಶೇಷವಾಗಿ ಒತ್ತಿ ಹೇಳಿದ್ದಾರೆ; ಒಳ್ಳೆಯ ಆಲೋಚನೆ. ಆಲೋಚನೆಗೆ ತಕ್ಕನುಡಿ, ನುಡಿಗೆ ತಕ್ಕ ನಡೆ – ಇವುಗಳನ್ನು ಬೋಧಿಸಿದ್ದಾರೆ. 'ನುಡಿಗೆ ತಕ್ಕ ನಡೆಯ ಕಂಡರೆ ಕೂಡಲಸಂಗಮದೇವ ತನ್ನೊಳಗಿರ್ಪನಯ್ಯ' ಎಂಬುದು ಅವರ ಆಶ್ವಾಸನೆ. ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡಕ್ಕೂ ಅವರು ಸಮಾನ ಪುರಸ್ಕಾರ ನೀಡಿದ್ದಾರೆ. | |
| | *ಪ್ರಶ್ನೆಗಳು :* | |
| | ಅ) ಕಾಯಕತತ್ತ್ವದ ಎರಡು ಮುಖಗಳಾವುವು ? | |
| | ಆ) ಅಂತರಂಗ–ಬಹಿರಂಗಗಳ ಸಾಮರಸ್ಯದ ಕುರಿತು ಬಸವಣ್ಣನವರ ಬೋಧನೆಗಳೇನು ? | |
| | ***ಉತ್ತರ :*** | |
| | ಅ) ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ದೈಹಿಕವಾದ ಕೆಲಸ ಮಾಡಬೇಕು. ಅದರಿಂದಲೇ ಜೀವನ ನಡೆಸಬೇಕು ಎಂಬುದು ಕಾಯಕತತ್ತ್ವದ ಒಂದು ಮುಖವಾದರೆ, ಯಾವ ಕೆಲಸವೂ ಕೀಳಲ್ಲ, ಪ್ರತಿಯೊಂದು ಕೆಲಸವೂ ಪವಿತ್ರ ಎನ್ನುವುದು ಕಾಯಕತತ್ತ್ವದ ಇನ್ನೊಂದು ಮುಖವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಆ) ಬಸವಣ್ಣನವರು ಅಂತರಂಗ–ಬಹಿರಂಗಗಳ ಸಾಮರಸ್ಯದ ಕುರಿತು ವಿಶೇಷವಾಗಿ ಒತ್ತಿ ಹೇಳಿದ್ದಾರೆ. ಒಳ್ಳೆಯ ಆಲೋಚನೆ, ಆಲೋಚನೆಗೆ ತಕ್ಕನುಡಿ, ನುಡಿಗೆ ತಕ್ಕ ನಡೆ ಇವುಗಳನ್ನು ಬೋಧಿಸಿದ್ದಾರೆ. 'ನುಡಿಗೆ ತಕ್ಕ ನಡೆಯ ಕಂಡರೆ ಕೂಡಲಸಂಗಮದೇವ ತನ್ನೊಳಗಿರ್ಪನಯ್ಯ' ಎಂಬುದು ಅವರ ಆಶ್ವಾಸನೆ. ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡಕ್ಕೂ ಅವರು ಸಮಾನ ಪುರಸ್ಕಾರ ನೀಡಿದ್ದಾರೆ. | |
| | **ವಿಭಾಗ – 'ಬಿ'** <br> **(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 46. | 'ವಧೂಪೇತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ <br> (ಎ) ಗುಣ ಸಂಧಿ (ಬಿ) ಯಣ್ ಸಂಧಿ <br> (ಸಿ) ವೃದ್ಧಿ ಸಂಧಿ (ಡಿ) ಸವರ್ಣದೀರ್ಘ ಸಂಧಿ <br> ***ಉತ್ತರ :*** (ಡಿ) ಸವರ್ಣದೀರ್ಘ ಸಂಧಿ | |
| 47. | ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ <br> (ಎ) ಭಾವಸೂಚಕ ಚಿಹ್ನೆ (ಬಿ) ವಿವರಣಾತ್ಮಕ ಚಿಹ್ನೆ <br> (ಸಿ) ಉದ್ಧರಣ ಚಿಹ್ನೆ (ಡಿ) ವಾಕ್ಯವೇಷ್ಟನ ಚಿಹ್ನೆ <br> ***ಉತ್ತರ :*** (ಬಿ) ವಿವರಣಾತ್ಮಕ ಚಿಹ್ನೆ | |
| 48. | 'ಊರನ್ನು' ಪದದಲ್ಲಿರುವ ವಿಭಕ್ತಿಯಿದು <br> (ಎ) ಚತುರ್ಥಿ (ಬಿ) ತೃತೀಯಾ <br> (ಸಿ) ದ್ವಿತೀಯಾ (ಡಿ) ಪ್ರಥಮಾ <br> ***ಉತ್ತರ :*** (ಸಿ) ದ್ವಿತೀಯಾ | |
| 49. | 'ಮಹಾಶಕ್ತನಾದ ದೇವರು ಸಮಸ್ತಲೋಕಗಳನ್ನು ಪ್ರೀತಿಯಿಂದ ಕಾಪಾಡುವನು' – ಈ ವಾಕ್ಯವು <br> (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ <br> (ಸಿ) ಮಿಶ್ರ ವಾಕ್ಯ (ಡಿ) ಸಂಭಾವನಾರ್ಥಕ ವಾಕ್ಯ <br> ***ಉತ್ತರ :*** (ಎ) ಸಾಮಾನ್ಯ ವಾಕ್ಯ | |
| 50. | 'ಗಮಕ' ಸಮಾಸಕ್ಕೆ ಉದಾಹರಣೆಯಿದು <br> (ಎ) ನಡುರಾತ್ರಿ (ಬಿ) ಹನುಮಭೀಮರಾಮರು <br> (ಸಿ) ನೆಯ್ದುವಸ್ತ್ರ (ಡಿ) ಮೋಸಮಾಡು <br> ***ಉತ್ತರ :*** (ಸಿ) ನೆಯ್ದುವಸ್ತ್ರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 51. | 'ಸೊಗಸಾಗಿ' ಪದವು ಅವ್ಯಯದ ಈ ಗುಂಪಿಗೆ ಸೇರಿದೆ<br>(ಎ) ಕ್ರಿಯಾರ್ಥಕಾವ್ಯಯ (ಬಿ) ಸಾಮಾನ್ಯಾರ್ಥಕಾವ್ಯಯ<br>(ಸಿ) ಸಂಬಂಧಾರ್ಥಕಾವ್ಯಯ (ಡಿ) ಅವಧಾರಣಾರ್ಥಕಾವ್ಯಯ<br>***ಉತ್ತರ :*** (ಬಿ) ಸಾಮಾನ್ಯಾರ್ಥಕಾವ್ಯಯ | |
| 52. | ಅನ್ವರ್ಥನಾಮ ಪದಕ್ಕೆ ಉದಾಹರಣೆಯಿದು<br>(ಎ) ವಿಜ್ಞಾನಿ (ಬಿ) ರಾಹುಲ<br>(ಸಿ) ಮನುಷ್ಯ (ಡಿ) ಮೂವರು<br>***ಉತ್ತರ :*** (ಎ) ವಿಜ್ಞಾನಿ | |
| 53. | ವಿಧ್ಯರ್ಥಕ ರೂಪದಲ್ಲಿರುವ ಕ್ರಿಯಾಪದವಿದು<br>(ಎ) ಮಾಡನು (ಬಿ) ಮಾಡಿಯಾನು<br>(ಸಿ) ಮಾಡೆವು (ಡಿ) ಮಾಡೋಣ<br>***ಉತ್ತರ :*** (ಡಿ) ಮಾಡೋಣ | |
| 54. | ತದ್ಧಿತಾಂತನಾಮಕ್ಕೆ ಉದಾಹರಣೆಯಾಗುವ ಪದವಿದು<br>(ಎ) ಸಿರಿತನ (ಬಿ) ಜಾಣತನ<br>(ಸಿ) ಕನ್ನಡಿಗ (ಡಿ) ಶಾಲೆಯತನಕ<br>***ಉತ್ತರ :*** (ಸಿ) ಕನ್ನಡಿಗ | |
| 55. | ಪೋರ್ಚ್‌ಗೀಸ್‌ನಿಂದ ಕನ್ನಡಕ್ಕೆ ಬಂದಿರುವ ಅನ್ಯದೇಶಿ ಪದ<br>(ಎ) ಕಾಲೇಜು (ಬಿ) ಸಾಬೂನು<br>(ಸಿ) ದವಾಖಾನೆ (ಡಿ) ಕಾರ್ಖಾನೆ<br>***ಉತ್ತರ :*** (ಬಿ) ಸಾಬೂನು | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ನಡುನಡುವೆ : ದ್ವಿರುಕ್ತಿ :: ಹಾಲ್ಜೇನು : ......................... .<br>***ಉತ್ತರ :*** ಜೋಡುನುಡಿ | |
| 57. | ತವಸಿ : ತಪಸ್ವಿ :: ಬೇಹಾರಿ : ......................... .<br>***ಉತ್ತರ :*** ವ್ಯಾಪಾರಿ | |
| 58. | ಹಣತೆ : ದೀಪ :: ಹರಿಕಾರ : ......................... .<br>***ಉತ್ತರ :*** ಮುಂದಾಳು | |
| 59. | ಗುರುಮೂರಿರೆ : ಮಗಣ :: ಲಘುಮೂರಿರೆ : ......................... .<br>***ಉತ್ತರ :*** 'ನ'ಗಣ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 60. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | 1 × 3 = 3 |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರುಳ್

***ಅಥವಾ***

ನಿನಗೆ ಹಸ್ತಿನಪುರದ ರಾಜ್ಯದ

ಘನತೆಯನು ಮಾಡುವೆನು ಪಾಂಡವ

ಜನಪ ಕೌರವ ಜನಪರೋಲೈಸುವರು ಗದ್ದುಗೆಯ

***ಉತ್ತರ :***

| ಭ | ರ | ನ | ಭ | ಭ | ರ | ಲ.ಗು |
|---|---|---|---|---|---|---|
| — U U | — U — | U U U | — U U | — U U | — U — | U — |
| ಎನ್ನಣು | ಗಾಳನೆ | ನ್ನಣುಗ | ದಮ್ಮನ | ನಿಕ್ಕಿದ | ಪಾರ್ಥಭೀ | ಮರುಳ್ |

ಇದು ಅಕ್ಷರ ಗಣ ಛಂದಸ್ಸಿನ 'ಉತ್ಪಲಮಾಲಾ ವೃತ್ತದ ಲಕ್ಷ್ಯವಾಗಿದೆ.

***ಅಥವಾ***

| ೩ | ೪ | ೩ | ೪ | |
|---|---|---|---|---|
| U U U | — U U | U U U | — U U | |
| ನಿನಗೆ | ಹಸ್ತಿನ | ಪುರದ | ರಾಜ್ಯದ | = ೧೪ |

| ೩ | ೪ | ೩ | ೪ | |
|---|---|---|---|---|
| U U U | U U — | U U U | — U U | |
| ಘನತೆ | ಯನು ಮಾ | ಡುವೆನು | ಪಾಂಡವ | = ೧೪ |

| ೩ | ೪ | ೩ | ೪ | ೩ | ೪ | ೨ | |
|---|---|---|---|---|---|---|---|
| U U U | — U U | U U U | — — | U U U | — U U | — | |
| ಜನಪ | ಕೌರವ | ಜನಪ | ರೋಲೈ | ಸುವರು | ಗದ್ದುಗೆ | ಯ | = ೨೩ |

ಇದು ಮಾತ್ರಾಗಣ ಛಂದಸ್ಸಿನ 'ಭಾಮಿನಿಷಟ್ಪದಿ'ಯಲ್ಲಿ ರಚಿತವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 61. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಪೂರ್ವದಿಕ್ಕಿನಲ್ಲಿ ಮೂಡಿದ ಸೂರ್ಯನು ಮುತ್ತೈದೆಯ ಹಣೆಯಲ್ಲಿರುವ ಕುಂಕುಮದಂತೆ ಕಂಡನು.

***ಅಥವಾ***

ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?

***ಉತ್ತರ :***

*ಅಲಂಕಾರದ ಹೆಸರು :* ಉಪಮಾಲಂಕಾರ

*ಲಕ್ಷಣ :* ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

*ಸಮನ್ವಯ :* *ಉಪಮೇಯ :* ಪೂರ್ವದಿಕ್ಕಿನಲ್ಲಿ ಮೂಡಿದ ಸೂರ್ಯ

*ಉಪಮಾನ :* ಮುತ್ತೈದೆಯ ಹಣೆಯಲ್ಲಿರುವ ಕುಂಕುಮ

*ಉಪಮಾವಾಚಕ ಪದ :* ಅಂತೆ

*ಸಮಾನಧರ್ಮ :* ಕಾಣು

ಇಲ್ಲಿ 'ಪೂರ್ವದಿಕ್ಕಿನಲ್ಲಿ ಮೂಡಿದ ಸೂರ್ಯ' ಎಂಬ ಉಪಮೇಯವನ್ನು 'ಮುತ್ತೈದೆಯ ಹಣೆಯಲ್ಲಿರುವ ಕುಂಕುಮ' ಎಂಬ ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ 'ಕಾಣು' ಎಂಬ ಸಮಾನಧರ್ಮವನ್ನು ಹೇಳಿ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಪೂರ್ಣ ಉಪಮಾಲಂಕಾರದ ಲಕ್ಷ್ಯವಾಗಿದೆ.

***ಅಥವಾ***

*ಅಲಂಕಾರದ ಹೆಸರು :* ಅರ್ಥಾಂತರನ್ಯಾಸ ಅಲಂಕಾರ

*ಲಕ್ಷಣ :* ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯವಾಕ್ಯವನ್ನು ವಿಶೇಷ ವಾಕ್ಯದಿಂದ ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರವೆನಿಸುತ್ತದೆ.

*ಸಮನ್ವಯ :* *ಉಪಮೇಯ :* ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು (ವಿಶೇಷ ವಾಕ್ಯ)

*ಉಪಮಾನ :* ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೆ ? (ಸಾಮಾನ್ಯ ವಾಕ್ಯ)

ಇಲ್ಲಿ 'ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು' ಎಂಬ ವಿಶೇಷ ವಾಕ್ಯವನ್ನು ಲೋಕದಲ್ಲಿ ಎಲ್ಲಾ ಬುದ್ಧಿವಂತ ಮಕ್ಕಳಿಗೆ ಅನ್ವಯವಾಗುವಂತಹ 'ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೆ ? ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಿ ಹೇಳಲಾಗಿರುವುದರಿಂದ ಇದು ಅರ್ಥಾಂತರನ್ಯಾಸ ಅಲಂಕಾರ ಎನಿಸುತ್ತದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** **(ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ)** | |
| 62. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 1 × 3 = 3 |
| | ✳ ಕೈ ಕೆಸರಾದರೆ ಬಾಯಿ ಮೊಸರು | |
| | ✳ ಕಟ್ಟುವುದು ಕಠಿಣ; ಕೆಡಹುವುದು ಸುಲಭ | |
| | ✳ ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ | |
| | ***ಉತ್ತರ :*** | |
| | ಗಾದೆಯ ಮಹತ್ತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 63. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ನಿಮ್ಮನ್ನು ಕೂಡಲಸಂಗಮದ ಸರ್ಕಾರಿ ಪ್ರೌಢಶಾಲೆಯ 'ಜಗದೀಶ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಏರ್ಪಡಿಸಿದ 'ಮತದಾನ ಜಾಗೃತಿ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ವಿಜಯವಾಣಿ' ದಿನಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಮುಧೋಳದ 'ಕವಿಚಕ್ರವರ್ತಿ ರನ್ನ ಬಡಾವಣೆ'ಯಲ್ಲಿ ವಾಸವಾಗಿರುವ 'ಶ್ವೇತಾ' ಎಂದು ಭಾವಿಸಿಕೊಂಡು ನಿಮ್ಮ 'ಪರೀಕ್ಷಾ ಸಿದ್ಧತೆಗಳ' ಕುರಿತು ಬೆಳಗಾವಿಯ ಬೈಲಹೊಂಗಲದಲ್ಲಿರುವ 'ಚನ್ನಮ್ಮ' ಎಂಬ ಹೆಸರಿನ ತಾಯಿಯವರಿಗೆ ಒಂದು ಪತ್ರ ಬರೆಯಿರಿ. | |
| | ***ಉತ್ತರ :*** | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಖಾಸಗಿ / ತಾಯಿಯವರಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| 64. | **ಪ್ರಬಂಧ ಬರೆವಣಿಗೆ :** | 1 × 5 = 5 |
| | * ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವಲ್ಲಿ ಕ್ರೀಡೆಗಳ ಮಹತ್ವ | |
| | * ಪ್ರಾಕೃತಿಕ ಸಂಪತ್ತಿನ ರಕ್ಷಣೆಯಲ್ಲಿ ಯುವ ಜನತೆಯ ಪಾತ್ರ | |
| | * ತ್ಯಾಜ್ಯವಸ್ತುಗಳ ನಿರ್ವಹಣೆ | |
| | ***ಉತ್ತರ :*** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |